

# ಚಿಕ್ಕಲಿ ಮತ್ತು ಬೆಕ್ಕು

■ ಗಣಪತಿ ಬಾಳೆಗದ್ದೆ

ಅಲ್ಲಿ ಬಂತು
ಇಲ್ಲಿ ಬಂತು
ಮೋಟುಮೀಸೆ
ಚಿಕ್ಕಲಿ

ಮೆಲ್ಲ ನಡೆದು
ಡಬ್ಬ ಇಳಿದು
ತಿನ್ನುತಿತ್ತು
ಚಕ್ಕುಲಿ

ಕಟಂ ಕುಟುಂ
ಕರಂ ಕುರುಂ
ಸದ್ದು ಮಾಡಿ
ಸವಿಯುತ

ಕಣ್ಣು ಮುಚ್ಚಿ
ಹಲ್ಲು ಕಚ್ಚಿ
ಆಹಾ! ಎಂದು
ನಲಿಯುತ!

ಅಷ್ಟರಲ್ಲಿ
ಬೆಕ್ಕು ಬಂದು
ಕಿಟಕಿಯಿಂದ
ಇಣುಕಿತು!

ಅದನು ಅರಿತ
ಇಲಿಯ ನೆಗೆತ
ಅಟ್ಟವೇರಿ
ಅಡಗಿತು! ■



ಎಸ್.ವಿ. ಹೂಗಾರ್

# ಮೋಸಕ್ಕೆ ತಕ್ಕ ಫಲ

■ ಪ್ರಕಾಶ ಎಸ್. ಮನ್ನಂಗಿ

ಒಂದೂರಲ್ಲೊಬ್ಬ ಶ್ರೀಮಂತ ಹೆಣ್ಣುಮಗಳಿದ್ದಳು. ಆಕೆಯ ಹೆಸರು ವನಿತಾ. ಆಕೆಗೆ ಮದುವೆಯಾಗಿ ಹತ್ತು ವರ್ಷಕ್ಕೆ ಗಂಡ ತೀರಿಕೊಂಡ. ನಂತರ ಆಕೆ ಒಬ್ಬಂಟಿಯಾಗಿ ಬಂಗಲೆಯಲ್ಲಿ ಬದುಕು ಸಾಗಿಸುತ್ತಿದ್ದಳು.

ಆಕೆಗೆ ಮಧ್ಯ ವಯಸ್ಸು ಬಂದಾಗ ಆಕೆಗೊಂದು ತೊಂದರೆ ಶುರುವಾಯಿತು. ಎರಡೂ ಕಣ್ಣುಗಳು ಕಾಣದಾದವು. ಆಕೆ ನಗರದ ವೈದ್ಯರೊಬ್ಬರನ್ನು ಕರೆಸಿದಳು. ಅವರಿಗೆ ಒಂದು ಕರಾರು ಮಾಡಿದಳು. 'ನೀವು ನನ್ನ ಕಣ್ಣು ಕಾಣುವಂತೆ ಮಾಡಿದರೆ ನೀವು ಕೇಳಿದಷ್ಟು ಹಣ ನೀಡುತ್ತೇನೆ. ಒಂದು ವೇಳೆ ಕಾಣದಿದ್ದರೆ ಒಂದು ನಯಾ ಪೈಸೆಯನ್ನೂ ನೀಡುವುದಿಲ್ಲ' ಎಂದಳು. ಇದಕ್ಕೆ ವೈದ್ಯರು ಒಪ್ಪಿ, ಚಿಕಿತ್ಸೆ ಆರಂಭಿಸಿದರು. ಒಂದೆರಡು ದಿನಗಳಾದ ಮೇಲೆ ವೈದ್ಯರಿಗೆ ದುರಾಸೆ ಹುಟ್ಟಿತು. ವನಿತಾಳ ಮನೆಯಲ್ಲಿ ಯಾರೂ ಇರಲಿಲ್ಲ. ಅವಳೊಬ್ಬಳೇ ಇದ್ದಳು. ಹೀಗಾಗಿ ವೈದ್ಯರು ಮನೆಯಲ್ಲಿದ್ದ ಒಂದೊಂದೇ ಸಾಮಾನನ್ನು ತಮ್ಮ ಮನೆಗೆ ಸಾಗಿಸತೊಡಗಿದರು.

ಮನೆಯಲ್ಲಿದ್ದ ಎಲ್ಲ ಪೀಠೋಪಕರಣ, ವಸ್ತ್ರ ಒಡವೆ ಸಾಗಿಸುವವರೆಗೆ ಚಿಕಿತ್ಸೆ ನಿಧಾನಕ್ಕೆ ಮುಂದುವರೆಸಿದರು. ಎಲ್ಲವನ್ನೂ ಸಾಗಿಸಿದ ಮೇಲೆ 'ಈಗ ನಿನ್ನ ಕಣ್ಣು ಕಾಣುತ್ತವೆ. ಚಿಕಿತ್ಸೆ ಮುಗಿಯಿತು' ಎಂದರು. ವನಿತಾ ಕಣ್ಣು ತೆರೆದು ನೋಡಿ ಗಾಬರಿಯಾದಳು. ಮನೆಯಲ್ಲಿದ್ದ ದುಬಾರಿ ಸಾಮಾನುಗಳೇ ಕಾಣಿಸಲಿಲ್ಲ. ಹೀಗಾಗಿ ವೈದ್ಯರಿಗೆ 'ನನ್ನ ಕಣ್ಣು ಸಂಪೂರ್ಣ ಕಾಣುವುದಿಲ್ಲ. ನಾನು ಗುಣಮುಖವಾಗಿಲ್ಲ' ಎಂದಳು. ಇದಕ್ಕೆ ವೈದ್ಯರು ಒಪ್ಪಲಿಲ್ಲ. ಹಣ ಕೊಡಲು ದುಂಬಾಲು ಬಿದ್ದರು. ಕೊನೆಗೆ ನ್ಯಾಯಾಲಯಕ್ಕೆ ದೂರು ಸಲ್ಲಿಸಿದರು.



ನ್ಯಾಯಾಧೀಶರು ವನಿತಾ ಮತ್ತು ವೈದ್ಯರನ್ನು ಕರೆಸಿ ವಿಚಾರಣೆ ನಡೆಸಿದರು. ವೈದ್ಯರು, ವನಿತಾ ಕರಾರಿನಂತೆ ಹಣ ಕೊಡುತ್ತಿಲ್ಲವೆಂದು ಆಪಾದಿಸಿದರು. ನ್ಯಾಯಾಧೀಶರು ವನಿತಾಳಿಗೆ 'ಹಣ ಕೊಡಲು ನಿನ್ನದೇನು ಆಕ್ಷೇಪಣೆ?' ಎಂದು ಕೇಳಿದರು.

'ನನ್ನದೇನು ತಕರಾರಿಲ್ಲ. ವೈದ್ಯರು ನನ್ನ ಕಣ್ಣು ಕಾಣುತ್ತವೆ ಎಂದು ಹೇಳುತ್ತಾರೆ. ನನ್ನ ಕಣ್ಣು ಕಂಡಿದ್ದರೆ ಮನೆಯಲ್ಲಿನ ವಸ್ತು ಒಡವೆಗಳು ಕಾಣಬೇಕಿತ್ತು. ಆದರೆ ಅವು ಕಾಣುತ್ತಿಲ್ಲ' ಎಂದು ಹೇಳಿಕೆ ನೀಡಿದಳು.

ನ್ಯಾಯಾಧೀಶರಿಗೆ ವೈದ್ಯನ ಸಂಚು ಅರ್ಥವಾಯಿತು. ತಕ್ಷಣ ಅವನನ್ನು ಬಂಧಿಸಲು ಆಜ್ಞಾಪಿಸಿ, ಶಿಕ್ಷೆ ನೀಡಿದರು.

ಕಣ್ಣು ಕಾಣತೊಡಗಿದ ವನಿತ ಸಂತಸದಿಂದ ನ್ಯಾಯಾಧೀಶರಿಗೆ ವಂದಿಸಿ ಮನೆಯ ದಾರಿ ಹಿಡಿದಳು. ಮೋಸ ಮಾಡಲು ಹೋದ ವೈದ್ಯ ತಾನೇ ಬಲಿಯಾದ. ■

# ಪುಟ್ಟಕಂದ

■ ಡಾ. ಜಿ. ಕೃಷ್ಣಪ್ಪ

ಅವ್ವನ ಮಡಿಲ
ಮಗ್ಗುಲ ಅರಳಿ
ಪುಟ್ಟಕಂದ ಮೂಡಿದೆ
ಪಿಳಿಪಿಳಿ ಕಣ್ಣು
ಬೆಳಕು ಬೀರಿ
ನನ್ನ ಕರೆದು ಆಡಿದೆ
ಮುಂಗುರುಳ ಚೆಂದ
ಹತ್ತಿರ ಸೆಳೆದು
ನಲಿನಲಿದಾಡು ಎನುತಿದೆ

ಮಂಜುಹನಿಯ
ಕಣ್ಣ ನೀರು
ಮುತ್ತಿನಂತೆ ಹೊಳೆದಿದೆ
ಸುಮೇರು ಮುಖದ
ಗಲ್ಲದ ಚುಕ್ಕೆ
ದೃಷ್ಟಿ ಬೊಟ್ಟಾಗಿ ಸೆಳೆದಿದೆ
ನಗುವ ಹಾಲ್ಗೆನ್ನೆ
ಮಧುರ ಹೊಳಪು
ಸುತ್ತು ಮುತ್ತು ಹರಿದಿದೆ! ■

